ನಿಂತ ಚಂದದ ಹುಡುಗಿಯರ ಹಾಗೆ ಜಡೆಯ ಮೇಲೆ ಕೂತು ಪೋಸು ಕೊಡುತ್ತಾ ನಮ್ಮ ಮರ್ಯಾದೆ ತೆಗೆಯುವುದು ಗ್ಯಾರಂಟಿ ಎಂದು ಈ ಸ್ಟೈಲ್‌ಗಳ ಸಹವಾಸಕ್ಕೇ ಹೋಗುವುದನ್ನು ನಿಲ್ಲಿಸಿಬಿಟ್ಟೆ.

'ಹೇನುಗಳು ಏಳು ಹಾಸಿಗೆ ದಾಟ್ತೋ', 'ಹೇನ್ ಹೆಚ್ಚಾದ್ರೆ ಹುಬ್ಬಲ್ ಹೇನಾತೋ' ಅನ್ನೂದೆಲ್ಲ ಆಗ ನನ್ನ ಪಾಲಿನ ರಮ್ಯ ಕಥಾನಕಗಳು. ಹೇನು ಏಳು ಹಾಸಿಗೆ ಹೇಗೆ ದಾಟ್ತದೆ? ಅದು ಅಷ್ಟು ನಿಧಾನವಾಗಿ ಹೋಗುವಾಗ ದಾರಿ ತಪ್ಪುದಿಲ್ವೆ? ಹೋಗಿ ಕೂದಲಿಗೇ ಹೇಗೆ ಸೇರ್ತದೆ? ಬೇರೆಯವರ ತಲೆಗೆ ಯಾಕೆ ಹೋಗ್ಬೇಕು? ಹೀಗೆಲ್ಲ ಪ್ರಶ್ನೆಗಳ ಸರಮಾಲೆ ಮನಸ್ಸಲ್ಲಿ. ಜೊತೆಗೆ ಆಗಾಗ ಹುಬ್ಬಲೇನಾದ್ರು ಹೇನು ಬಂದಿದೆಯಾ ಎಂದು ಪರೀಕ್ಷಿಸುವ ಕೆಲಸ. ತಲೆಯಲ್ಲಿ ಈ ಹೇನಿದ್ದರೆ ಅದೇನೋ ಪಾಪಪ್ರಜ್ಞೆ ಕಾಡುತ್ತಿರುತ್ತದೆ. ಏಳು ಹಾಸಿಗೆ ದಾಟಿ ಬೇರೆಯವರ ತಲೆಗೆ ನಮ್ಮ ತಲೆಯಿಂದ ಹೋಗುತ್ತಲ್ಲಾ ಅನ್ನೋ ಅಪರಾಧಿ ಮನೋಭಾವ. ಅವರೇನಾದರೂ, 'ನಿನ್ ಮಂಡಿಯಿಂದ ನಂಗ್ ಹೇನ್ ಬಂದ್ದೋ' ಅಂದರೆ ಎನ್ನುವ ಹೆದರಿಕೆ, ಅವಮಾನ. ಆದರೂ 'ಮೊನ್ನೆ ಅವಳೊಟ್ಟಿಗೆ ಮಲ್ಗಂಡಿದ್ದೆ ಅಲ್ದ, ಅಲ್ಲಿಂದ ಅವಳ ತಲೆಯಿಂದ ಹೇನ್ ಬಂತ್ ಇರ್ಕ್' ಅಂತ ಅಂದು ಕೊಂಡರೆ ಅದೇನೋ ಸ್ವಲ್ಪ ಸಮಾಧಾನ.

ರಜೆಯಲ್ಲಿ ಅಜ್ಜಿಯ ಮನೆಗೆ ಹೋದಾಗ ಈ ಹೇನಿನ ಗೋಳು ಹೇಳ ತೀರದು. ಮನೆಯಲ್ಲಾದರೆ ಅಮ್ಮ ಬಾಚಿ ಈ ಹೇನಿನ ಸಂಖ್ಯಾ ಸ್ಫೋಟವನ್ನು ನಿಯಂತ್ರಣದಲ್ಲಿ ಇಟ್ಟಿರುತ್ತಾರೆ. ಆದರೆ ಬೇರೆಡೆಗೆ ಹೋದಾಗ ಕೂದಲು ಬಾಚಿ ಹೇನು ತೆಗೆಯಲು ಹೇಳುವುದು ಯಾರಲ್ಲಿ? ಹೇಳಿದರೂ, 'ಹೆಣ್ಣಿನ್ ಮಂಡಲಿ ಹೇನ್ ಕಾಣ್ ಹ್ಯಾಂಗ್ ಓಡ್ತೋ' ಅಂತ ಅವಮಾನ ಮಾಡಿದರೆ ಅನ್ನೋ ಭಯ. ನನ್ನದೇ ಬೇರೆ ಬಾಚಣಿಗೆ ತೆಗೆದುಕೊಂಡು ಬಾಚುವಾ ಎಂದರೆ ಮಕ್ಕಳಿಗೆ ಹಣ ಎಲ್ಲಿಂದ ಸಿಗಬೇಕು. ಅದನ್ನು ಮನೆಯಿಂದ ಹೊರಗೆ ತೆಗೆದುಕೊಂಡು ಹೋದರೆ ಅಮ್ಮ, 'ಇಪ್ಪುದ್ ಒಂದ್ ಹಣಿಗೆ ನೀನ್ ಅದ್ನ ಬಿಸಾಕಂಡ್ ಬರ್ಬೇಡ' ಅಂತ ಬಿಲ್ಕುಲ್ ಕೊಡುವುದಿಲ್ಲ. ತಲೆಸ್ನಾನ ಮಾಡಿದಾಗ ಟವೆಲ್‌ನಲ್ಲಿ ಗುಟ್ಟಾಗಿ ಒರೆಸಿ ಒರೆಸಿ ಹಾಕಿದರೂ ಎಲ್ಲವೂ ಹೋಗುವುದಿಲ್ಲವೇ.

ಶಾಲೆಯಲ್ಲಿರುವಾಗ ಈ ಹೇನಿನ ಸಂಖ್ಯೆಯ ಮಟ್ಟವನ್ನು ಅಳೆಯಲು ನಮ್ಮದೇ ಮಾಪನಗಳಿದ್ದವು. ಈ ಜಲಾಶಯದಲ್ಲಿ ನೀರಿನ ಮಟ್ಟ ಅಳೆಯುವ ಹಾಗೆ. ತಲೆಯಲ್ಲಿ ಎಲ್ಲರಿಗೂ ಕಾಣುವ ಹಾಗೆ ಓಡಾಡಿಕೊಂಡಿದ್ದರೆ, ಸೀರುಗಳು ಹೆಣೆದುಕೊಂಡು ಎದುರೇ ಕಾಣುವ ಹಾಗಿದ್ದರೆ, ಅಗಲ ಬಾಯಿಯ ಹಣಿಗೆಯಲ್ಲೂ ಹೇನುಗಳು ಅನಿರೀಕ್ಷಿತವಾಗಿ ಬಂದು ಬಿಟ್ಟರೆ ಅದು ತಲೆತುಂಬಾ ಹೇನುಗಳಿರುವ ಸೂಚನೆ. ತಲೆ ಕೆರೆದುಕೊಂಡಾಗ ಕೈ ಉಗುರಿಗೆ ಸಿಗುವಂತಿದ್ದರೆ ಜಾಸ್ತಿಯಾಗುತ್ತಿರುವ ಸೂಚನೆ, ತಲೆ ತುರಿಸುತ್ತಿದ್ದರೆ ಚಿಕ್ಕ ಹೇನುಗಳ ಸಂಖ್ಯೆಯಲ್ಲಿ ಹೆಚ್ಚಳ ಹೀಗೆ.

ಈ ಹಳೇ ಸಿನಿಮಾಗಳಲ್ಲಿ ನೋಡಿರಬಹುದು – ಈ ಹಳ್ಳಿಗಳಲ್ಲಿ ಸಂಜೆ ಹೊತ್ತು ಹೆಣ್ಣುಮಕ್ಕಳು ಒಬ್ಬರ ತಲೆಯನ್ನು ಒಬ್ಬರು ನೋಡುತ್ತಾ ಹೇನು ಕುಕ್ಕುತ್ತಿರುತ್ತಾರೆ. ಈ ಕುಕ್ಕು ಎಕ್ಸ್‌ಪರ್ಟ್‌ಗಳ ಈ 'ಆಪರೇಶನ್ ಹೇನು' ಕಾರ್ಯಾಚರಣೆ ಎಂದರೆ ನಾನು ಹೆದರಿ ಪಡ್ಡ. ಇವರೋ ನಿಧಾನಕ್ಕೆ ಕಣ್ಣಲ್ಲಿ ಕಣ್ಣಿಟ್ಟು ಕೂದಲಿನ್ನು ಭಾಗಮಾಡಿಕೊಂಡು ಅದರಲ್ಲಿ ಹೇನನ್ನು ಹುಡುಕುತ್ತಿರುತ್ತಾರೆ. ಹೇನು ಸುಳಿದಾಡುತ್ತಿದ್ದರೆ ಅದನ್ನು ಹಿಡಿಯಲೆಂದೇ ಬೆಳೆಸಿಕೊಂಡ ತಮ್ಮ ಉದ್ದ ಉಗುರಿನಲ್ಲಿ ಅದನ್ನು ಅಲ್ಲೆ ಕುಕ್ಕಿ ಕೊಂದು ಬಿಡುತ್ತಾರೆ. ಎಲ್ಲರಿಗೂ ಈ ಕುಕ್ಕುವ ವಿದ್ಯೆ